# ಗೋ ವಿಶ್ವ

Cow Universe    गौ विश्व

ಸರ್ವಜಿತ್ ಸಂವತ್ಸರ    ಪುಷ್ಯ    ಫೆಬ್ರವರಿ ೨೦೦೮    ಸಂಪುಟ–೨    ಸಂಚಿಕೆ–೨

ಗುರುವಾಣಿ

## ಮಹಾ ಸಮರ್ಪಣೆಗಿದು ಸಕಾಲ



ಹೂರಣ

ಗುರುವಾಣಿ
ಪ್ರಶ್ನೋತ್ತರ
ಲಲಿತ ಪ್ರಬಂಧ – ಕೊಟ್ಟಿಗೆ
ಮಾಸದ ಗೋವು – ಹಳ್ಳಿಕಾರ್
ರೈತರ ಆತ್ಮಹತ್ಯೆ ತಡೆಗೆ ಉಪಾಯ: ಗೋ ಆಧಾರಿತ ಕೃಷಿ
ಬ್ರೆಜಿಲ್‌ನಲ್ಲಿ ಗಿರ್ ತಳಿಯ ಹಸವಿನ ಮೇಲ್ಮೆ



ನಮಗೇಕೋ ಈ ಸನ್ನಿವೇಶದಲ್ಲಿ ಶಿಬಿ ಚಕ್ರವರ್ತಿಯು ನೆನಪಾಗುತ್ತಿದ್ದಾನೆ. ಆತನ ಜೀವನದ ಮಹತ್ವಪೂರ್ಣ ಘಟನೆಯೊಂದನ್ನು ಇಲ್ಲಿ ಹಂಚಿಕೊಳ್ಳುತ್ತಿದ್ದೇವೆ.

ಉದ್ಯಾನದಲ್ಲೊಮ್ಮೆ ಶಿಬಿ ಸುತ್ತಾಡುತ್ತಿದ್ದಾಗ ಗಾಯಗೊಂಡ ಪಾರಿವಾಳವೊಂದು ಆತನ ತೆಕ್ಕೆಗೆ ಬಂದು ಬೀಳುತ್ತದೆ. ಬೇಟೆಗಾರನೊಬ್ಬ ಆ ಪಾರಿವಾಳಕ್ಕೆ ಗುರಿಯಿಟ್ಟಿದ್ದ ಬಾಣ ಅದರ ದೇಹದಲ್ಲಿ ನೆಟ್ಟಿತ್ತು. ನೆತ್ತರು ಬಸಿಯುತ್ತ ಪ್ರಾಣೋತ್ಕ್ರಮಣ ಸ್ಥಿತಿಯಲ್ಲಿದ್ದ ಆ ಬಡ ಪಕ್ಷಿ ಚಕ್ರವರ್ತಿಯಿಂದ ರಕ್ಷಣೆಯನ್ನು ಬೇಡಿತ್ತು. ದಯಾಳು ಶಿಬಿ ತನ್ನ ಎಂದಿನ ರಾಜಧರ್ಮಕ್ಕನುಗುಣವಾಗಿ ಅದರ ಆರೈಕೆಗೆ ಮುಂದಾಗುವಷ್ಟರಲ್ಲಿ ಅಲ್ಲಿಗೆ ಬಂದ ಬೇಟೆಗಾರ ತನ್ನ ಹಕ್ಕಿನ ಬೇಟೆಯನ್ನು ಕೋರಿದ. ಆದರೆ ಶಿಬಿ ಪಾರಿವಾಳಕ್ಕೆ ಅಭಯ ಕೊಟ್ಟಾಗಿತ್ತು. ಬೇಟೆಗಾರ ಸುಮ್ಮನಿದ್ದಾನೆಯೇ? ಪಾರಿವಾಳವನ್ನು ಕೊಡದಿದ್ದರೆ ತನ್ನ ಆಹಾರ ಕಸಿದುಕೊಂಡಂತಾಗುತ್ತದೆ ಎಂದು ಎಚ್ಚರಿಸಿದ.

ಚಕ್ರವರ್ತಿಗೆ ಉಭಯ ಸಂಕಟ. ಪಾರಿವಾಳಕೊಟ್ಟರೆ ಅದರ ಪ್ರಾಣಕ್ಕೆ ಸಂಚಕಾರ. ಕೊಡದಿದ್ದರೆ ಬೇಡನಿಗೆ ಅನ್ಯಾಯ. ಕೊನೆಗೆ ಪಾರಿವಾಳಕ್ಕೆ ಪ್ರತಿಯಾಗಿ ತನ್ನ ದೇಹದ ಮಾಂಸವನ್ನೇ ದಾನ ಮಾಡುವ ಕರಾರನ್ನು ಮುಂದಿಡುತ್ತಾನೆ ಶಿಬಿ. ಮಾಂಸ ಅಳೆಯಲು ತಕ್ಕಡಿ ಸಿದ್ಧವಾಗುತ್ತದೆ. ಚಕ್ರವರ್ತಿಯ ದೇಹವನ್ನು ಕತ್ತರಿಸಲು ಯಾರು ತಾನೇ ಮುಂದಾಗುತ್ತಾರೆ? ಕೊನೆಗೆ ತಕ್ಕಡಿಯ ಒಂದು ಪಾರ್ಶ್ವದಲ್ಲಿ ಪಾರಿವಾಳವನ್ನಿಟ್ಟು ಮತ್ತೊಂದೆಡೆ ತಾನೇ ಸ್ವತಃ ತನ್ನ ದೇಹದ ಮಾಂಸವನ್ನು ಕತ್ತರಿಸಿ ಇಡಲಾರಂಭಿಸುತ್ತಾನೆ ಶಿಬಿ. ಕೈ ಕಾಲುಗಳೆಲ್ಲವನ್ನೂ ಕತ್ತರಿಸಿಟ್ಟರೂ ಪಾರಿವಾಳದ ತೂಕಕ್ಕೆ ಸಮನಾಗುವುದಿಲ್ಲ. ಮಾತಿಗೆ ಬದ್ಧನಾದ ಆತ ಅಂತಿಮವಾಗಿ ಇಡೀ ದೇಹವನ್ನೇ ಬೇಡನಿಗೆ ಸಮರ್ಪಿಸಿಕೊಳ್ಳುತ್ತಾನೆ.

ಎಂಥ ಆದರ್ಶ! ಅದೆಂಥ ಸಮರ್ಪಣೆ. ಮನುಕುಲಕ್ಕಾಗಿ ಶತಶತಮಾನಗಳಿಂದ ತನ್ನೆಲ್ಲವನ್ನೂ ಧಾರೆಯೆರೆಯುತ್ತಿರುವ ಗೋ ಮಾತೆಗೆ ಇಂದು ನಾವು ಸಹ ಶಿಬಿಯಂತೆ ಸಂಪೂರ್ಣ ಸಮರ್ಪಣೆಗೆ ಮುಂದಾಗಬೇಕಿದೆ. ಅಂಥ ಮಹಾಸಮರ್ಪಣೆಯ ಕಾಲಘಟ್ಟವಿದು.

ಇನ್ನೊಂದು ತುಲನೆ. ಸಂಸ್ಕೃತದಲ್ಲಿ ಭಿಕ್ಷು, ಭಿಕ್ಷುಕ ಎಂಬ ಎರಡು ಶಬ್ದಗಳಿವೆ. ಎರಡರ ನಡುವಿನ ಭೌತಿಕ ವ್ಯತ್ಯಾಸ ಅತ್ಯಂತ ನಗಣ್ಯ, ಕೇವಲ ಒಂದಕ್ಷರದ್ದು. ಆದರೆ ಪ್ರವೃತ್ತಿಯ ವಿಚಾರಕ್ಕೆ ಬಂದರೆ ಅಗಾಧ ಅಂತರವಿದೆ. ಭಿಕ್ಷು ಸಾಕ್ಷಾತ್ ಭಗವದ್ ಸಾನ್ನಿಧ್ಯವನ್ನೇ ಬೇಡುತ್ತಾನೆ. ಭಿಕ್ಷುಕ ಲೌಕಿಕಕ್ಕೆ ಸೀಮಿತನಾಗುತ್ತಾನೆ. ಇಬ್ಬರೂ ಇದಕ್ಕೆ ಪ್ರತಿಯಾಗಿ ಭಕ್ತಿ ಕೃತಜ್ಞತೆಗಳ ಸಮರ್ಪಣೆ ಮಾಡುತ್ತಾರೆ.

ಅದಿರಲಿ. ಜೀವನದಲ್ಲಿ ಯಾರಿಂದಲೇ, ಏನನ್ನೇ ಪಡೆದರೂ ಅದಕ್ಕೆ ಪ್ರತಿಯಾಗಿ ಏನನ್ನಾದರೂ ಮರಳಿ ಕೊಡಲೇಬೇಕು. ಇದು ಮಾನವ ಗುಣ. ಗೋ ಮಾತೆ ಕೇವಲ ಒಂದನ್ನಲ್ಲ. ಸರ್ವಸ್ವವನ್ನೂ ಕೊಟ್ಟಿದೆ. ಇದು ನಮ್ಮ ತಲೆಮಾರಿಗಷ್ಟೇ ಸೀಮಿತವಾಗುಳಿದಿಲ್ಲ. ಆಕೆಯದು ಸಾರ್ವಕಾಲಿಕ ವಾತ್ಸಲ್ಯಸ್ರೋತ. ಇದಕ್ಕೆ ಪ್ರತಿಯಾಗಿ ಆ ಮಹಾಮಾತೆಗೆ ನಾವೇನು ಕೊಡಲು ಸಾಧ್ಯ? ಸ್ವಯಂ ಸಮರ್ಪಣೆಯೊಂದೇ ನಮಗಿರುವ ಮಾರ್ಗ.

**ಗೋ ಭಕ್ತರೇ,**

ಗೋ ಮಾತೆಗೆ ನಾವು ನಮ್ಮ ಸರ್ವಸ್ವವನ್ನೂ ಕೊಡುವ ಕಾಲ ಬಂದಿದೆ. ದುರಂತವೆಂದರೆ ನಮಗೆಲ್ಲ ಕೊಟ್ಟವಳ, ಎಲ್ಲವನ್ನೂ ದೋಚುತ್ತಿದ್ದೇವೆ. ಕನಿಷ್ಠ ಕೃತಜ್ಞತೆಯೂ ವ್ಯಕ್ತವಾಗುತ್ತಿಲ್ಲ. ಇಂಥ ಸಂದರ್ಭದಲ್ಲೂ ಧ್ವನಿಯೆತ್ತದೇ ಕುಳಿತರೆ ಅದು ಖಂಡಿತಾ ಅಪಚಾರ. ಈ ಹಿನ್ನೆಲೆಯಲ್ಲಿಯೇ ಮಾತೆಗೊಂದು ಕೃತಜ್ಞತಾಪೂರ್ವಕ ಕೈಂಕರ್ಯಕ್ಕೆ ಮುಂದಾಗಲಾಗಿದೆ. ನಮ್ಮೊಂದಿಗೆ ಆ ಮಹಾಮಾತೆಯ ಹಾಲುಂಡ ಇಡೀ ಮಾನವಕುಲವೇ ಕೈಜೋಡಿಸಬೇಕಿದೆ.

ತುಂಬ ಕನಸುಗಳನ್ನು ಹೊತ್ತು ಗೋ ಸಂರಕ್ಷಣೆಯ ಆಂದೋಲನಕ್ಕಡಿ ಇಡಲಾಗಿದೆ. ಕಗ್ಗಲೀಪುರದಂಥ ಕೆಲವು ಗೋಶಾಲೆಗಳನ್ನು ನಾಡಿನಾದ್ಯಂತ ಆರಂಭಿಸಲಾಗುತ್ತಿದೆ. ಕೆಲವು ಆರಂಭಗೊಂಡಿದೆ. ಇದನ್ನು ವಿಶ್ವಕ್ಕೇ ಮಾದರಿಯಾಗಿಸುವ ಆಶಯ ನಮ್ಮದು. ಅದು ಪೂರ್ಣಗೊಳ್ಳಲು, ನಮ್ಮ ಕನಸು ಸಾಕಾರಗೊಳ್ಳಲು ಎಲ್ಲರ 'ಸಮರ್ಪಣೆ' ಅಗತ್ಯ.

ಸುಖಕ್ಕೊಂದು ರೂಪವೇ ಗೋವು. ಅಂಥ ಸುಖಸ್ವರೂಪಿಣಿಗೇ ಇಂದು ಸಂಕಷ್ಟ ಬಂದೊದಗುತ್ತಿದೆ. ಇದನ್ನು ನಿವಾರಿಸಲು ನಮ್ಮನ್ನು ನಾವು ಸಮರ್ಪಿಸಿಕೊಳ್ಳೋಣ. ಭೂ ಮಂಡಲವನ್ನೇ ಸುಖದ ಸ್ವರ್ಗವಾಗಿ ಪರಿವರ್ತಿಸೋಣ. ನೀವೆಲ್ಲರೂ ಅಂಥ ಸುಖದ ಭಾಗವಾಗಿ ಬನ್ನಿ.

**ವಂದೇ ಗೋ ಮಾತರಂ**

(ಕಗ್ಗಲಿಪುರದಲ್ಲಿ ಫೆ.೧೭ರಂದು ಜರುಗಿದ ಸಮರ್ಪಣ–೨೦೦೮ ಕಾರ್ಯಕ್ರಮದಲ್ಲಿ ನೀಡಿದ ಆಶೀರ್ವಚನ)

**– ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**
**ಶ್ರೀ ರಾಮಚಂದ್ರಾಪುರ ಮಠ**

# ಪ್ರಶ್ನೋತ್ತರ

ಪ್ರ: ಗೋಮೂತ್ರದಿಂದ ಕ್ಯಾನ್ಸರ್ ರೋಗ ಸಹ ವಾಸಿಯಾಗುತ್ತದೆ ಎನ್ನುತ್ತಾರೆ. ನಿಜವೇ?

ಉ: ಖಂಡಿತಾ ನಿಜ. ದೇಸೀ ಆಕಳ ಗೋಮೂತ್ರದಲ್ಲಿ ಯುರಿಕ್ ಆಸಿಡ್ ಟ್ರಿಪ್ಸಿನ್ ಇನ್ಹಿಬಿತೊರ್, ಎಚ್–೧೧ ಬೀಟ ಅಯೋದೋಲ್ ಮುಂತಾದ ರಾಸಾಯನಿಕ ದ್ರವ್ಯಗಳಿವೆ. ಇವು ಕ್ಯಾನ್ಸರ್ ಜೀವಕೋಶಗಳು ವಿಭಜನೆಯಾಗದಂತೆ ತಡೆಗಟ್ಟುತ್ತವೆ ಹಾಗೂ ಕ್ಯಾನ್ಸರ್ ಪೀಡಿತ ಜೀವಕೋಶಗಳನ್ನು ಸಹಜ ಸ್ಥಿತಿಗೆ ತರುತ್ತವೆ. ಶ್ರೀ ರಾಮಚಂದ್ರಾಪುರ ಮಠದಿಂದ ಕಾಸರಗೋಡಿನಲ್ಲಿ ಸ್ಥಾಪಿತವಾಗಿರುವ ಪುಣ್ಯಕೋಟಿ ಅರ್ಬುದ ಚಿಕಿತ್ಸಾ ಕೇಂದ್ರದಲ್ಲಿ ಡಾ. ಸತ್ಯಶಂಕರ ಮರ್ಮುಡಿಯವರ ನೇತೃತ್ವದಲ್ಲಿ ಹಲವು ಕ್ಯಾನ್ಸರ್ ರೋಗಿಗಳು ಯಶಸ್ವಿಯಾಗಿ ಗೋಮೂತ್ರ ಚಿಕಿತ್ಸೆ ಪಡೆದಿದ್ದಾರೆ.

ಪ್ರ: ಗೋಮೂತ್ರದ ಅರ್ಕ ಎಂದರೇನು? ಅದು ಎಲ್ಲಿ ದೊರೆಯುತ್ತದೆ?

ಉ: ಶುದ್ಧ ದೇಸಿ ತಳಿ ಹಸುಗಳ ಗೊಮೂತ್ರವನ್ನು ಭಟ್ಟಿ ಇಳಿಸಿದಾಗ ದೊರೆಯುವುದೇ ಗೋಮೂತ್ರದ ಅರ್ಕ. ಇದರಲ್ಲಿ ಬಣ್ಣ ಇರುವುದಿಲ್ಲ. ವಾಸನೆ ಸ್ವಲ್ಪ ಇರುತ್ತದೆ. ಅರ್ಕವನ್ನು ಬಹಳ ಕಾಲದವರೆಗೆ ಶೇಖರಿಸಿಡಬಹುದು. ವೈದ್ಯರ ಸಲಹೆಯ ಮೇರೆಗೆ ಇದನ್ನು ನಿಯಮಿತ ಪ್ರಮಾಣದಲ್ಲಿ ಸೇವಿಸುತ್ತಾ ಬಂದರೆ, ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ. ಆರೋಗ್ಯ ಸುಧಾರಿಸುತ್ತದೆ. ಈಗ ಶ್ರೀ ರಾಮಚಂದ್ರಾಪುರ ಮಠದಲ್ಲಿ "ಅಮೃತಸಾರ" ಎಂಬ ಹೆಸರಿನಲ್ಲಿ ಗೋಮೂತ್ರದ ಅರ್ಕವನ್ನು ತಯಾರಿಸಿ ಮಾರಾಟ ಮಾಡಲಾಗುತ್ತಿದೆ.

ಪ್ರ: ಭಾರತದಲ್ಲಿ ದನದ ಸಗಣಿ ಎಷ್ಟು ಉತ್ಪಾದನೆಯಾಗುತ್ತದೆ?

ಉ: ಭಾರತದಲ್ಲಿ ಸುಮಾರು ೨೦ ಕೋಟಿ ಜಾನುವಾರುಗಳು (ಹಸುಗಳು, ಎತ್ತುಗಳು, ಹೋರಿಗಳು) ಇವೆ ಎಂದು ಅಂದಾಜು. ೧ ಹಸು ದಿನ ಒಂದಕ್ಕೆ ಸರಾಸರಿ ೧೦ ಕೆ.ಜಿ. ಸಗಣಿ ಹಾಕುತ್ತದೆ ಎಂದಿತ್ತುಕೊಂಡರೂ ೧ ದಿನಕ್ಕೆ ೨೦ ಲಕ್ಷ ಟನ್ ಸಗಣಿ ದೊರೆಯುತ್ತದೆ. ಅದನ್ನು ಸಮರ್ಥವಾಗಿ ಬಳಸಿಕೊಂಡರೆ, ಅಮೂಲ್ಯ ಸಂಪನ್ಮೂಲವಾಗಬಹುದು. ವರ್ಷಕ್ಕೆ ೪೮ ಸಾವಿರ ಕೋಟಿ ರೂಪಾಯಿಗಳಷ್ಟು ರಸಗೊಬ್ಬರ ಬಳಕೆಯನ್ನು ತಗ್ಗಿಸಬಹುದು. ಆದ್ದರಿಂದಲೇ ಭಾರತಕ್ಕೆ ದನದ ಸಗಣಿಯು ಕೊಹಿನೂರ್ ವಜ್ರಕ್ಕಿಂತಲೂ ಅಮೂಲ್ಯವಾದುದು ಎನ್ನಲಾಗುತ್ತದೆ. ಇದರಿಂದ ಮಣ್ಣಿನ ಫಲವತ್ತತೆಯೂ ಸುಧಾರಿಸುತ್ತದೆ.

– **ಪ್ರೊ. ಬಿ. ಎಂ. ಕುಮಾರಸ್ವಾಮಿ** (ಕೃಪೆ: ವಿಜಯ ಕರ್ನಾಟಕ)

**ಲಲಿತ ಪ್ರಬಂಧ**

# ಕೊಟ್ಟಿಗೆ

ಅಮ್ಮ ಅಂದಳು ಫೋನಿನಲ್ಲಿ "ದನ ಮೊನ್ನೆ ಕರ ಹಾಕ್ತು. ಆದರೆ ಹಾಲು ಕರೆಯಕ್ಕೇ ಕೊಡ್ತಾ ಇಲ್ಲೆ. ಹಾಯಕ್ಕೇ ಬರ್ತು. ನಿಲ್ತೇ ಇಲ್ಲೆ ಒಂದು ಕಡೆ, ಒಂದೇ ಸಮನೆ ತಿರುಗ್ತು. ಮೊಲೆಗೆ ಕೈ ಹಾಕಿದ್ರೆ ಒದಿತು.."

ಅಯ್ಯೋ! ಏನಾಯಿತು ನಮ್ಮನೆ ದನಕ್ಕೆ? ಎಂಥ ಸಿಟ್ಟು ಅದಕ್ಕೆ? ನಾನು ಯೋಚಿಸಿದೆ. ಹೇಳಿದೆ ಅಮ್ಮನ ಹತ್ರ "ಕೈ ಮರ್ಚಲೇನ? ಅಪ್ಪನ ಹತ್ರ ನೋಡಕ್ಕೆ ಹೇಳಕ್ಕಾಯಿತ್ತು" ಅಂತ. ಅಮ್ಮ ಅಂದಳು "ಅಯ್ಯೋ ಎಲ್ಲಾ ನೋಡ್ಯಾತು. ಅವರಿಗೂ ಕೊಡ್ಲೆ. ನಿನ್ನೆ ಮಾವ ಬಂದಿದ್ದಿದ್ದ, ಅವನ ಹತ್ರ ನೋಡು ಅಂದ್ಯ. ಅವಂಗೆ ಸಲೀಸಾಗಿ ಕೊಡ್ತು!"

ವಿಷಯ ಏನಪ್ಪಾ ಅಂದ್ರೆ, ಅದು ಮಾವನ ಮನೆಯಿಂದ ಹೊಡೆದು ತಂದ ದನ. ನಮ್ಮನೆಯಲ್ಲಿ ಅಜ್ಜಿ ತೀರಿಕೊಂಡಾಗ, ಪ್ರತಿ ತಿಂಗಳೂ ಗೋಗ್ರಾಸ ಕೊಡಬೇಕಲ್ಲ, ಅದಕ್ಕೆ ದನ ಇರಲಿಲ್ಲ. ಬೇರೆ ಯಾರ ಮನೆ ದನಕ್ಕಾದರೂ ಕೊಡುವುದು ಅಂತ ನಾವು ತೀರ್ಮಾನಿಸಿದ್ದೆವು. ಆದರೆ ಅಷ್ಟೊತ್ತಿಗೆ ನಮ್ಮನೆ ಎಮ್ಮೆಯೂ ಹಾಲು ಕಮ್ಮಿ ಮಾಡಿತ್ತು. 'ಓ, ಈಗ ಒಂದು ಬೇರೆ ಜಾನುವಾರು ಮಾಡೋದೇ ಸೈ' ಅಂತ ಅಪ್ಪ ಯೋಚಿಸುತ್ತಿದ್ದಾಗಲೆ ಮಾವ ಬಂದು "ಈಗ ಅರ್ಜೆಂಟಿಗೆ ಎಲ್ಲಿ ಅಂತ ಹುಡುಕ್ತಿ? ನಮ್ಮನೆ ದನಾನೆ ಹೊಡಕಂಡು ಹೋಕ್ಯಳಿ" ಅಂದ. ನಾವೂ ಹೆಚ್ಚು ಯೋಚಿಸದೆ ಮಾವನ ಮನೆ ದನ 'ಕೃಷ್ಣೆ'ಯನ್ನು ತಂದುಕೊಂಡೆವು. ತೌರಿನಿಂದ ಬಂದಮೇಲೆ ಬೇರೆ ಹೆಸರಿಡುವ ಸಂಪ್ರದಾಯ ಜಾನುವಾರುಗಳಲ್ಲಿ ಇಲ್ಲವಾದರೂ ನಾನು ಅದಕ್ಕೆ 'ಮಂಗಳ' ಅಂತ ಹೊಸ ಹೆಸರಿಟ್ಟೆ. ನಾನು ಆ ಹೆಸರಿಟ್ಟದ್ದಕ್ಕೆ ನಿಜವಾದ ಕಾರಣ ಅದು ನನ್ನ ಕಾಲೇಜಿನ ಚಂದದ ಹುಡುಗಿಯೊಬ್ಬಳ ಹೆಸರು ಎಂಬುದಾಗಿತ್ತಾದರೂ "ಇವತ್ತು ಮಂಗಳವಾರವಾದ್ದರಿಂದ 'ಮಂಗಳ' ಅಂತ ಹೆಸರಿಟ್ಟೆ" ಅಂತ ನಾನಂದಾಗ ನಮ್ಮ ಮನೆಯಲ್ಲಿ ಯಾರಿಗೂ ಅನುಮಾನ ಬರಲಿಲ್ಲ.

ಇದೆಲ್ಲಾ ಆಗಿದ್ದು ಎರಡು ವರ್ಷದ ಹಿಂದೆ. ಆದರೆ ಆ ದನ ಇನ್ನೂ ಮಾವನನ್ನು ನೆನಪಿಟ್ಟುಕೊಂಡಿದೆ! ಅದು ಅವರ ಮನೆಯಲ್ಲೇ ಹುಟ್ಟಿದ ದನ. ಮಾವನ ಮನೆಯವರು ಅಕ್ಕರೆಯಿಂದ ಬೆಳೆಸಿದ ದನ. ಮೊದಲನೇ ಕರು ಹಾಕಿದಾಕ್ಷಣ ನಮ್ಮನೆಗೆ ಬಂದಿತ್ತು ಅದು.

ಹಳ್ಳಿ ಮನೆ ಎಂದಮೇಲೆ ಅದಕ್ಕೊಂದು ಕೊಟ್ಟಿಗೆ ಇರಬೇಕು. ಕೊಟ್ಟಿಗೆ ತುಂಬಾ ಜಾನುವಾರುಗಳಿರಬೇಕು. ಒಂದು ಕೊಟ್ಟಿಗೆ ಇದೆ ಎಂದರೆ ಏನೆಲ್ಲ ಇರಬೇಕು... ಹುಲ್ಲು ಗೊಣಬೆ, ಕಲ್ಲಿದ ಬ್ಯಾಣ, ಹಸಿಹುಲ್ಲಿಗೆ ಹಿತ್ಲು, ಹಿಂಡಿ-ಗೋಧಿಭೂಸ-ತೌಡು ಶೇಖರಿಸಿಡಲು ಗೋಡೌನು, ಅಕ್ಕಚ್ಚು ತೋರಲು ಒಂದು ಹಿಂಡಾಲಿಯಂ ಬಕೀಟು, ಹರಿದು ಹೋದರೆ ಬೇಕಾಗುತ್ತದೆ ಎಂದು ತಂದಿಟ್ಟ ಎಕ್ಸ್‌ಟ್ರಾ ಕಣ್ಣಿ.... ಕೊಟ್ಟಿಗೆ ಇದೆ ಎಂದಮೇಲೆ ಅಲ್ಲಿ ಏನೆಲ್ಲ ಇರುತ್ತದೆ... ಆಡಿಕೊಳ್ಳಲೆಂದು ಅಂಗಳದಲ್ಲಿ ಬಿಟ್ಟಿದ್ದ ಕರು ಅಲ್ಲಲ್ಲಿ ಹಾಕಿದ ಸಗಣಿ ಉಳ್ಳೆ, ಸರಿಯಾದ ಹೊತ್ತಿಗೆ ಹುಲ್ಲು ಹಾಕಲಿಲ್ಲವೆಂದರೆ ಕೊಟ್ಟಿಗೆಯಿಂದ ಬರುವ ದನದ 'ಅಂಬಾ..' ಕೂಗು, ಅದನ್ನು ಹಿಂಬಾಲಿಸುವ ಎಮ್ಮೆಯ 'ಆಂಯ್' ಕೂಗು, ಹಾಗೆ ಕೊಟ್ಟಿಗೆಯಿಂದ ಕೂಗುಗಳು ಬಂದಾಕ್ಷಣ ಅಮ್ಮನನ್ನು 'ಹುಲ್ಲು ಹಾಕಲ್ಯನೇ?' ಎಂದು ಕೇಳುವ ಅಪ್ಪ, 'ಹಿಂಡಿ ಖಾಲಿ ಆಯ್ದು. ಸುಬ್ಬಣ್ಣನ ವ್ಯಾನು ಸಾಗರಕ್ಕೆ ಹೋಗ್ತೇನ, ಒಂದು ಚೀಲ ಹಾಕ್ಯಂಡು ಬರಕ್ಕೆ ಹೇಳಲಾಗಿತ್ತು' ಎಂಬ ಅಮ್ಮನ ವರಾತ, ಹಾಲು ಕೊಡದಿದ್ದರೆ 'ಮುರ ಇಟ್ಕಂಡು ನೋಡಿ' ಎಂಬ ಸಲಹೆ... ಕೊಟ್ಟಿಗೆ ಎಂಬುದು ಹಳ್ಳಿಯ ಮನೆಗಳ ಅವಿಭಾಜ್ಯ ಅಂಗ. ಅದು ಹಳ್ಳಿಗರ ಜೀವನಶೈಲಿಯೆಂಬ ಚಿತ್ರಾನ್ನಕ್ಕೆ ಹಾಕಿದ ಉಪ್ಪು-ಖಾರ.

ಮನೆಗೆ ಹೊಂದಿಕೊಂಡಂತೆ ಇರುತ್ತದೆ ಕೊಟ್ಟಿಗೆ. ಚಪ್ಪಡಿ ಹಾಸಿದ ಕೊಟ್ಟಿಗೆಯಲ್ಲಿ ಮಧ್ಯದಲ್ಲೊಂದು ಒಗದಿ. ಜಾನುವಾರು ಹೊಯ್ದ ಉಚ್ಚೆ (ಗ್ವಾತ), ಅವುಗಳ ಮೈತೊಳೆದ ನೀರು, ಎಲ್ಲಾ ಆ ಒಗದಿಯ ಮೂಲಕ ಸಾಗಿ ಗೊಬ್ಬರಗುಂಡಿಯ ಪಕ್ಕ ಇರುವ ಒಂದು ಬಾನಿಗೆ ಬೀಳುತ್ತದೆ. ಹುಲ್ಲು ತಿನ್ನುತ್ತಾ ನಿಂತಿರುವ ದನ, ಮಲಗಿ ಮೆಲಕು ಹಾಕುತ್ತಿರುವ ಎಮ್ಮೆ, ಆಸೆಗಣ್ಣುಗಳಲ್ಲಿ ತಾಯಿಯನ್ನೇ ನೋಡುತ್ತಿರುವ ಕರು, ತಾನು ಹಾಕಿದ ಸಗಣಿಯನ್ನು ತಾನೇ ಮೂಸುತ್ತಿರುವ ಪೆದ್ದ ಎಮ್ಮೆಕರು... ಈ ಜಾನುವಾರುಗಳು ಎಷ್ಟೊಂದು ಸುಖಿಗಳು ಅನ್ನಿಸುತ್ತದೆ ಎಷ್ಟೋ ಸಲ. ಅವುಗಳ ಸುಖ ನಮಗಿಲ್ಲವಲ್ಲ ಅನ್ನಿಸುತ್ತದೆ. ಆರಾಮಾಗಿ ಹಾಕಿದ ಹುಲ್ಲು ತಿನ್ನುವುದು, ಮಲಗುವುದು, ಮೆಲುಕು ಹಾಕುವುದು, ಏಳುವುದು.... ಉಚ್ಚೆ ಹೊಯ್ಯುವುದಕ್ಕೂ ಹೊರಗೆ ಹೋಗಬೇಕಿಲ್ಲ; ಸಂಡಾಸನ್ನು ಲ್ಯಾಟ್ರೀನ್ ರೂಮಿಗೇ ಹೋಗಿ ಮಾಡಬೇಕೆಂಬ ರಿಸ್ಟ್ರಿಕ್ಷನ್ ಇಲ್ಲ! ನಿಂತಲ್ಲೇ ಎಲ್ಲಾ ಮಾಡಿದರಾಯಿತು. ಬೇಕಾದರೆ ಸಾಕಿಕೊಂಡವರು ಅವನ್ನೆಲ್ಲಾ ಕ್ಲೀನ್ ಮಾಡಿಕೊಳ್ಳಲಿ. ಆಹಾ! ಎಷ್ಟು ಸುಖಜೀವನ! ಯಾವ ಸಾಫ್ಟ್‌ವೇರ್ ಇಂಜಿನಿಯರ್‌ರಿನ ಹೆಂಡತಿಗಿದೆ ಈ ಸುಖ?

ಇವೆಲ್ಲಾ ಮೇಯಲು ಹೊರಗಡೆ ಬಿಡದ, ಮನೆಯಲ್ಲೇ ಕಟ್ಟಿ ಹಾಕುವ ಮನೆಗಳ ಜಾನುವಾರುಗಳ ಸುಖದ ಕತೆಯಾದರೆ ಮೇಯಲು ಬ್ಯಾಣಕ್ಕೆ ಬಿಡುವ ಜಾನುವರಗಳ ಸುಖ ಮತ್ತೊಂದು ತರ! ಬೆಳಗ್ಗೆ ಎದ್ದ ಕೂಡಲೆ ಹುಲ್ಲು ಹಾಕಿ, ಹಾಲು ಕರೆದು, ತೊಳಕಲು, ಹಿಂಡಿ ಕೊಟ್ಟು, ಕಣ್ಣಿ ಕಳಚಿ ಹೊರಗೆ ಬಿಟ್ಟರೆ ಆಮೇಲು ಅವು ವಾಪಾಸು ಕೊಟ್ಟಿಗೆಗೆ ಬರುವುದು ಸೂರ್ಯ ಮುಳುಗಿದ ಮೇಲೇ. ಕೆಲ ಊರುಗಳಲ್ಲಿ ದನಗಾವಲು ಅಂತಲೇ ಇರುತ್ತದೆ. 'ದನ ಕಾಯುವ ಹುಡುಗ' ಎಂಬ ಬಿರುದಾಂಕಿತ ಹುಡುಗನೊಬ್ಬ ತನ್ನ ಕಂಬಳಿ ಕೊಪ್ಪೆ ಮತ್ತು ದಾಸಾಳ ಬರ್ಲು ಹಿಡಿದು 'ದನ ಹೊಡಿರೋ..' ಎಂದು ಕೂಗುತ್ತ ಪ್ರತಿ ಬೆಳಗ್ಗೆ ಬರುತ್ತಾನೆ. ಅವನ ಕೂಗು ಕೇಳುತ್ತಿದ್ದಂತೆ ಎಲ್ಲರೂ ತಮ್ಮ ಮನೆಗಳ ಕೊಟ್ಟಿಗೆಯ ಬಾಗಿಲು ತೆರೆದು ದನಕರುಗಳನ್ನು ಕಣ್ಣಿ ಕಳಚಿ ಹೊರಬಿಡುತ್ತಾರೆ. ಎಲ್ಲರ ಮನೆಯ ಜಾನುವಾರುಗಳ ಹಿಂಡಿನ ಜೊತೆ ನಮ್ಮನೆ ದನವೂ ಸೇರಿಕೊಳ್ಳುವುದನ್ನು ನೋಡುವಾಗ ಶಾಲೆಗೆ ಹೊರಟ ಮಗುವಿನ ಚಿತ್ರ ಕಣ್ಣ ಮುಂದೆ ಬರುತ್ತದೆ. ಬೀಳ್ಕೊಡುವ ಹೃದಯ ಒಂದು ಕ್ಷಣ ತುಂಬಿಕೊಳ್ಳುತ್ತದೆ.

ಗೋಪಬಾಲಕ ಜಾನುವಾರುಗಳನ್ನೆಲ್ಲ ಹೊಡೆದುಕೊಂಡು ಯಾವುದೋ ಬೆಟ್ಟದ ಮೇಲೋ, ಹುಲ್ಲುಗಾವಲಿಗೋ ಒಯ್ಯುತ್ತಾನೆ. ಅಲ್ಲಿ ಅವನ್ನೆಲ್ಲಾ ಮೇಯಲು ಬಿಟ್ಟು ಇವನು ಮರ ಹತ್ತಿ ಹಣ್ಣು ಕೀಳುವುದೋ, ಊರ ಹುಡುಗರಿಗೆ ಎರಡು ರೂಪಾಯಿಗೆ ಕೊಡಲು ಪೆಟ್ಲು ಮಾಡುವುದರಲ್ಲೋ ತೊಡಗುತ್ತಾನೆ. ಅವನು ಹಾಗೆ ಬೇರೆ ಕಡೆ ಹೋಗುತ್ತಿದ್ದಂತೆಯೇ ದನಗಳು ಮರದ ತಂಪನ್ನರಸಿ ಹೊರಟರೆ ಎಮ್ಮೆಗಳು ಕೆಸರಿನ ಹೊಂಡ ಎಲ್ಲಿದೆ ಅಂತ ಹುಡುಕಿ ಹೊರಡುತ್ತವೆ. ಈ ಎಮ್ಮೆಗಳಿಗೆ ಕೆಸರಿನ ಹೊಂಡದಲ್ಲಿ ಹೊರಳಾಡುವುದೆಂದರೆ ಭಾರೀ ಪ್ರೀತಿ. ಉರಿಬಿಸಿಲಿನಲ್ಲಿ ಮುಖವನ್ನಷ್ಟೇ ನೀರಿನಿಂದ ಮೇಲಕ್ಕೆ ಎತ್ತಿ ಕೆಸರಿನ ಹೊಂಡದಲ್ಲಿ ಶತಸೋಮಾರಿಯಂತೆ ಈಜುತ್ತಾ ತೂಕಡಿಸುತ್ತಾ ಇರುವ ಎಮ್ಮೆಯ ಸುಖದ ತಂಪಿನ ಮುಂದೆ ಹೊಂಡಾ ಕಾರಿನ ಏಸಿ ಏನೂ ಅಲ್ಲ. ಹೊಟ್ಟೆಕಿಚ್ಚಾಗುತ್ತೆ ಅದನ್ನು ನೋಡಿದರೆ!

ಸೂರ್ಯ ಮುಳುಗುವ ಹೊತ್ತಿಗೆ ದನಕರುಗಳೆಲ್ಲ ತಮ್ಮ ತಮ್ಮ ಮನೆ ಸೇರುತ್ತವೆ. ಬೆಳಗ್ಗೆಯಷ್ಟೆ ಮೈತೊಳೆದು ಬಿಟ್ಟಿದ್ದ ಎಮ್ಮೆ ಮೈಯೆಲ್ಲಾ ಕೆಸರು ಮಾಡಿಕೊಂಡು ಬಂದದ್ದನ್ನು ನೋಡಿ ಅಪ್ಪ ಸಿಡಿಮಿಡಿಗೊಳ್ಳುತ್ತಾನೆ. ಗೂಟಕ್ಕೆ ಕಣ್ಣಿ ಕಟ್ಟಿ ಹಿಂದೆ ಬರುವಾಗ ಅದು ಬೀಸಿದ ಬಾಲ ಅಪ್ಪನ ಮುಖಕ್ಕೆ ಹೊಡೆದು ಅಪ್ಪನ ಸಿಟ್ಟು ಇಮ್ಮಡಿಯಾಗುತ್ತದೆ. 'ಥೂ, ಸುಮ್ನೆ ನಿಂತ್ಕಳಕ್ಕೆ ಆಗ್ತಲ್ಯನೆ?' ಎಂದು ಒಂದೇಟು ಕೊಡುತ್ತಾನೆ. ಆಮೇಲೆ ಅಕ್ಕಚ್ಚು ಕೊಡುತ್ತಾನೆ. ಯಜಮಾನ ಬೈದನಲ್ಲ ಎಂಬ ಅವಮಾನಕ್ಕೋ ಅಥವಾ ಮತ್ತೆ ಹೊಡೆದಾನು ಎಂಬ ಭಯಕ್ಕೋ, ಪೂರ್ತಿ ಎರಡು ಬಕೆಟ್ ಅಕ್ಕಚ್ಚನ್ನು ಶುಲ್ಪಿ ಎಮ್ಮೆ ತಲೆ ಎತ್ತದೆ ಕುಡಿದು ಮುಗಿಸುತ್ತದೆ. ಆಮೇಲೆ ಅಮ್ಮ ದನದ ಹಾಲನ್ನೂ ಅಪ್ಪ ಎಮ್ಮೆಯ ಹಾಲನ್ನೂ ಕರೆಯುತ್ತಾರೆ. ಹಾಲು ಕರೆದಾದಮೇಲೆ ಹುಲ್ಲು ಹಾಕಿ, ಕೊಟ್ಟಿಗೆಯ ಬಾಗಿಲು ಮುಚ್ಚಿ ಒಳಬಂದರೆ ಹೆಚ್ಚುಕಮ್ಮಿ ಅವತ್ತಿನ ಕೊಟ್ಟಿಗೆ ಕೆಲಸ ಆದಂತೆಯೇ.

ಹಳ್ಳಿಯ ಜನ ಕೊಟ್ಟಿಗೆಗೆ, ಜಾನುವಾರುಗಳಿಗೆ ಎಷ್ಟು ಹೊಂದಿಕೊಂಡಿರುತ್ತಾರೆಂದರೆ ಒಂದು ದಿನ ಕೊಟ್ಟಿಗೆಗೆ ಹೋಗಲಿಲ್ಲವೆಂದರೆ ಸಮಾಧಾನವಿರುವುದಿಲ್ಲ. ಅಲ್ಲದೇ ಕೊಟ್ಟಿಗೆ ಇಲ್ಲದಿದ್ದರೆ ಹಳ್ಳಿ ಮನೆಯ ಜನಗಳಿಗೆ ಅಂತಹ ಕೆಲಸವೂ ಇರುವುದಿಲ್ಲ. ಕೊಟ್ಟಿಗೆ ಕೆಲಸ ದಿನದ ಮುಖ್ಯ ಕೆಲಸಗಳಲ್ಲಿ ಒಂದು. ಬೆಳಗ್ಗೆ ಎದ್ದಕೂಡಲೇ ಹಾಲು ಕರೆಯುವುದು, ಆಮೇಲೆ ದನಕರುಗಳ ಮೈತೊಳೆಯುವುದು, ಆಮೇಲೆ ಕೊಟ್ಟಿಗೆ ಕ್ಲೀನ್ ಮಾಡುವುದು, ಗೋಬರ್ ಗ್ಯಾಸಿಗೆ ಸಗಣಿ ಕರಡುವುದು, ಹಿತ್ಲಿನಿಂದ ಹಸಿ ಹುಲ್ಲು ಕೊಯ್ದು ತರುವುದು, ಅವಾಗಿವಾಗ ಹುಲ್ಲು ಹಾಕುತ್ತಿರುವುದು, ಸಂಜೆ ತೊಳಕಲು ತೋರುವುದು, ಹಿಂಡಿ ಕೊಡುವುದು.... ಹೀಗೆ ಕೊಟ್ಟಿಗೆ ಕೆಲಸ ಹಳ್ಳಿಗರ ದಿನದ ಬಹಳ ಸಮಯವನ್ನು ತಿಂದು ಹಾಕುತ್ತದೆ. ಇದನ್ನು ಆಲೋಚಿಸಿಯೇ ಕೆಲ ಮನೆಯವರು ಇತ್ತೀಚೆಗೆ ತಮ್ಮ ಮನೆಯ ಜಾನುವಾರುಗಳನ್ನೆಲ್ಲಾ ಮಾರಿ ಹಾಲು ಕೊಳ್ಳುವುದನ್ನು ರೂಢಿಸಿಕೊಂಡಿದ್ದಾರೆ. ಅಲ್ಲದೇ ಕೊಟ್ಟಿಗೆಗೆ ಖರ್ಚೂ ತುಂಬಾನೇ ಬರುತ್ತದೆ. ದನಕರುಗಳಿಗೆ ಹಿಂಡಿ, ಹತ್ತಿಕಾಳು, ಗೋಧಿಬೂಸ, ತೌಡು, ಬಿಳಿಹುಲ್ಲು... ಹೀಗೆ ಆಹಾರಕ್ಕೇ ಸಿಕ್ಕಾಪಟ್ಟೆ ಖರ್ಚು. ಅವಕ್ಕೆ ಖಾಯಿಲೆ-ಕಸಾಲೆ ಬಂದರಂತೂ ಡಾಕ್ಟರಿಗೆ-ಔಷಧಿಗೆ ದುಡ್ಡು ಕೊಟ್ಟು ಪೂರೈಸುವುದೇ ಅಲ್ಲ. ಈ ಮಧ್ಯೆ ಎಮ್ಮೆ-ದನಗಳು ಯಾವಾಗ ಬತ್ತಿಸಿಕೊಳ್ಳುತ್ತವೆ (ಹಾಲುಕೊಡುವುದು ನಿಲ್ಲಿಸುವುದು) ಎಂದು ಹೇಳಲಾಗುವುದಿಲ್ಲ. ಬಲ್ಡು (ಬರಡು) ಬಿದ್ದ ಜಾನುವಾರನ್ನು ಇಟ್ಟುಕೊಂಡು ಸುಮ್ಮನೆ ಸಾಕುವುದು ಯಜಮಾನನಿಗೆ ಹೊರೆಯೇ. ಹೀಟಿಗೆ ಬಂದಾಗ ಮಳಗದ್ದೆ ಮನೋಹರನನ್ನೋ ಮೂಡಗೋಡು ಅರವಿಂದನನ್ನೋ ಕರೆಸಿ ಇನ್ಸೆಮಿನೇಶನ್ ಮಾಡಿಸಬೇಕು. ಒಂದೇ ಸಲಕ್ಕೆ ಗರ್ಭ ಕಟ್ಟುತ್ತದೆ ಅಂತ ಹೇಳಲಾಗುವುದಿಲ್ಲ. ಮತ್ತೆ ಮತ್ತೆ ಕರೆಸಬೇಕಾಗಬಹುದು. ಗಬ್ಬ ಆಗಿ ಐದಾರು ತಿಂಗಳಾದ ಮೇಲೆ ದನ ಹಾಲು ಕೊಡುವುದು ನಿಲ್ಲಿಸುತ್ತದೆ. ಇನ್ನು ಅದು ಕರು ಹಾಕುವವರೆಗೂ ಕಾಯಬೇಕು. ಇದೆಲ್ಲಾ ರಗಳೆಗಳು ಬೇಡವೇ ಬೇಡ ಎಂದು ನಿರ್ಧರಿಸಿ ಹಳ್ಳಿ ಜನಗಳು ಈಗೀಗ 'ಬುದ್ಧಿವಂತ'ರಾಗುತ್ತಿದ್ದಾರೆ. ದಿನಕ್ಕೆ ಎರಡು ಲೀಟರ್ ಹಾಲು ಕೊಂಡರಾಯಿತು. ತೋಟಕ್ಕೆ ಹಾಕಿಸಲು ಎರಡು ಲೋಡ್ ಗೊಬ್ಬರ ಕೊಂಡರಾಯಿತು. ಅಡುಗೆಗೆ ಹೇಗಿದ್ದರೂ ಸಿಲಿಂಡರ್ ಗ್ಯಾಸ್ ಇದೆ.

ಆದರೆ ಹಾಗೆ ಜಾನುವಾರುಗಳನ್ನೆಲ್ಲಾ ಕೊಟ್ಟು ಕೊಟ್ಟಿಗೆ ಖಾಲಿ ಮಾಡಿಕೊಂಡವರು ಆ ಮೂಲಕ ಕೆಲಸ ಕಮ್ಮಿ ಮಾಡಿಕೊಂಡರೂ ಕೊಟ್ಟಿಗೆಯಿಂದ ಸಿಗುತ್ತಿದ್ದ ಅದೆಷ್ಟೋ ಖುಷಿಯನ್ನು ಅವರು ಮಿಸ್ ಮಾಡಿಕೊಳ್ಳುತ್ತಾರೆ. ದನಕರುಗಳು, ಅವು ಕೊಟ್ಟಿಗೆಯಲ್ಲಿದ್ದರೂ, ಮನೆ ಮಂದಿಯಷ್ಟೇ ಪ್ರಾಮುಖ್ಯತೆ ಇರುತ್ತದೆ ಅವಕ್ಕೆ. 'ಏನೇ, ಇನ್ನೂ ಮಲಗಿದ್ಯಲ, ಏಳು ಸಾಕು' ಎನ್ನುತ್ತಾ ಕೊಟ್ಟಿಗೆಗೆ ಹೋದರೆ ಅದೆಷ್ಟು ದೈನ್ಯತೆಯಿಂದ ಎದ್ದು ನಿಲ್ಲುತ್ತದೆ ದನ! ಎಷ್ಟು ಪ್ರೀತಿ ತೋರಿಸುತ್ತದೆ ಅದು ಯಜಮಾನನಿಗೆ! ಸಾಕುಪ್ರಾಣಿಗಳ ಒಡನಾಟದಲ್ಲಿ ನಾವು ನಮ್ಮ ದುಃಖವನ್ನೆಲ್ಲಾ ಮರೆಯುತ್ತೇವೆ. ಅಪ್ಪ-ಅಮ್ಮ ಯಾವುದೋ ಕಾರಣಕ್ಕೆ ಬೈದಾಗ ಕೊಟ್ಟಿಗೆಗೆ ಹೋಗಿ ಕರುವಿನ ಎದುರು ನಿಂತು ಬಿಕ್ಕಿ ಬಿಕ್ಕಿ ಅಳುತಿದ್ದರೆ, ಅದು ನಮ್ಮ ಕಷ್ಟವನ್ನೆಲ್ಲಾ ಅರಿತಂತೆ, ತನ್ನ ಒರಟು ನಾಲಿಗೆಯಿಂದ ನಮ್ಮ ಕಾಲನ್ನು ನೆಕ್ಕುತ್ತಾ ಸಾಂತ್ವನ ಹೇಳುತ್ತದೆ. ಕೊಟ್ಟಿಗೆಗೆ ಹೋಗಿ ಬರುವಾಗೆಲ್ಲ ದನಕರುಗಳೊಂದಿಗೆ ಮಾತನಾಡುತ್ತಾ, ಅವುಗಳ ಮೈದಡುವುತ್ತಾ, ಒಂದು ವಿಲಕ್ಷಣ ಸುಖವನ್ನು ಅನುಭವಿಸುತ್ತಿರುತ್ತೇವೆ.

ಜಾನುವಾರುಗಳಿಗೆ, ಕೊಟ್ಟಿಗೆಯನ್ನು ತೂಗಿಸುವುದಕ್ಕೆ ತುಂಬಾ ಖರ್ಚು ಬರುತ್ತದೆಯಾದರೂ ಅದರಿಂದ ಲಾಭವೂ ಅಷ್ಟೇ ಇದೆ. ಒಳ್ಳೆಯ ಬನಿ ಇರುವ ಹಾಲು, ಸಗಣಿಯಿಂದ ಗೋಬರ್ ಗ್ಯಾಸ್, ಕೊಟ್ಟಿಗೆಯ ತ್ಯಾಜ್ಯದಿಂದ ತೋಟಕ್ಕೆ ಫಲವತ್ತಾದ ಗೊಬ್ಬರ.... ನಮ್ಮನೆ ಅಜ್ಜಿ ಅವಾಗಿವಾಗ ಹೇಳುತ್ತಿದ್ದಳು: 'ನಾವು ತಿನ್ನೋದು ದನಕರದ ಸಗಣಿ! ಅವುನ್ನ ಚನಾಗಿ ಸಾಕವು' ಅಂತ. ಎಷ್ಟೋ ಸಲ ಅದು ಸರಿ ಅನ್ನಿಸುತ್ತದೆ.

ಎಮ್ಮೆ ವ್ಯಾಪಾರದಿಂದಲೇ ದುಡ್ಡು ಮಾಡಿದವರಿದ್ದಾರೆ. ಅದನ್ನೇ ದಂಧೆಯನ್ನಾಗಿ, ಉದ್ಯೋಗವನ್ನಾಗಿ ಮಾಡಿಕೊಂಡವರಿದ್ದಾರೆ. ಕ್ಯಾಸನೂರು ಮಾರ್ಕ್ಯಾನಂತೂ ಫೇಮಸ್ಸು ನಮ್ಮ ಕಡೆ! ಸಾಗರದ ಪುರುಷೋತ್ತಮ ಎಮ್ಮೆ ದಲ್ಲಾಳಿ ಮಾಡಿ ಮಾಡಿಯೇ ಚೆನ್ನದ ಹಲ್ಲು ಕಟ್ಟಿಸಿಕೊಂಡಿದ್ದಾನೆ! ಒಳ್ಳೆಯ ಶುಲ್ಪಿ (ಸುರುಟಿ) ಎಮ್ಮೆಗಳಿಗೆ, ಜರ್ಸಿ

ಆಕಳುಗಳಿಗೆ ತುಂಬಾನೇ ರೇಟ್ ಇದೆ.

ನಾನು ಇಲ್ಲಿ ಬರೆದದ್ದೆಲ್ಲಾ ದನ–ಎಮ್ಮೆಗಳ ಕತೆಯಾಯಿತು. ಗದ್ದೆ ಇರುವ ಮನೆಗಳಲ್ಲಿ ಕೋಣ, ಎತ್ತುಗಳನ್ನೂ ಸಾಕಿರುತ್ತಾರೆ. ಎತ್ತುಗಳು ಗದ್ದೆ ಉಳುಮೆಗೆ, ಗಾಡಿಯಲ್ಲಿ ಸರಂಜಾಮುಗಳನ್ನು ಸಾಗಿಸುವುದಕ್ಕೆ ಬಳಸಲ್ಪಡುತ್ತವೆ. ಕೋಣಗಳು ಆಲೆಮನೆಯಲ್ಲಿ ಗಾಣ ತಿರುಗಿಸಲಿಕ್ಕೆ ಬಳಸಲ್ಪಡುತ್ತವೆ. ಗದ್ದೆ ಇಲ್ಲದ ಮನೆಯಲ್ಲಿ ಗಂಡು ಕರುಗಳು ಜನಿಸಿದರೆ ಅವಕ್ಕೆ ಒಂದೆರಡು ವರ್ಷ ವಯಸ್ಸಾಗುತ್ತಿದ್ದಂತೆಯೇ ಮಾರಿಬಿಡುತ್ತಾರೆ. 'ಕೊಟ್ಟಿಗೆಯಲ್ಲಿ ಹೆಣ್ಣು ಹುಟ್ಟಬೇಕು; ಮನೆಯಲ್ಲಿ ಗಂಡು ಹುಟ್ಟಬೇಕು' ಎಂಬುದು ನಮ್ಮ ಕಡೆ ನಾಣ್ಣುಡಿ.

ಮನುಷ್ಯರಿಗೆ ಇಷ್ಟೆಲ್ಲಾ ಉಪಕಾರ ಮಾಡುವ ದನಕರುಗಳಿಗೆ ಹಳ್ಳಿಗರು ದೀಪಾವಳಿಯ ಸಮಯದಲ್ಲಿ ವಿಶೇಷ ಪೂಜೆ ಮಾಡಿ ಕೃತಜ್ಞತೆ ಸಲ್ಲಿಸುತ್ತಾರೆ. ಗೋವುಗಳಿಗೆ ಎಣ್ಣೆ ಸ್ನಾನ ಮಾಡಿಸಿ, ಬಣ್ಣ ಹಚ್ಚಿ, ಹೂಮಾಲೆ ಕಟ್ಟಿ ಸಿಂಗರಿಸಿ, ಭರ್ಜರಿ ಪೂಜೆ ಮಾಡಿ, ಹೋಳಿಗೆ–ಗೋಗ್ರಾಸ ಕೊಟ್ಟು ಸಂಭ್ರಮಿಸುತ್ತಾರೆ. ಗೋವುಗಳನ್ನು ದೇವರೆಂದೇ ಪೂಜಿಸುತ್ತಾರೆ. ಗೋಮಾತಾ ಎಂದೇ ಕರೆಯುತ್ತಾರೆ. ಆದರೆ ಗೋವಿಗೆ ಸಿಗುವ ಈ ವಿಶೇಷ ಆದರ ಎಮ್ಮೆ–ಕೋಣಗಳಿಗೆ ಅಷ್ಟಾಗಿ ಸಿಕ್ಕುವುದಿಲ್ಲ.

ಬೆಂಗಳೂರಿನಿಂದ ಊರಿಗೆ ಹೋದಾಗೆಲ್ಲಾ, ನನ್ನನ್ನು ಎಂದೂ ಮರೆಯದ ಮಂಗಳ, ನನ್ನನ್ನು ಕಾಣುತ್ತಿದ್ದಂತೆ ಕಣ್ಣೆ ಕಿತ್ತು ಬರುವಂತೆ, ನನ್ನನ್ನು ಮುಟ್ಟಲು ಬಾಗುತ್ತಾ ಹಾತೊರೆಯುತ್ತದೆ. ಕಾಲೇಜಿನ ಮಂಗಳಳ ಪ್ರೀತಿ ದಕ್ಕದಿದ್ದರೂ ಕೊಟ್ಟಿಗೆಯ ಮಂಗಳಳ ಪ್ರೀತಿ ಸಿಕ್ಕತಲ್ಲ, ನಾನು ಧನ್ಯ! ಅದರ ಪ್ರೀತಿಗೆ ನನ್ನ ಮರುಪ್ರೀತಿಯ ಶರಣು.

**– ಸುಶ್ರುತ ದೊಡ್ಡೇರಿ**

## ಮಾಸದ ಗೋವು

## ಹಳ್ಳಿಕಾರ್

ಭಾರತದ ಅತ್ಯಮೂಲ್ಯ ಗೋ ಪರಂಪರೆಯಲ್ಲಿ ವಿನಾಶದ ಅಂಚಿನಲ್ಲಿರುವ ತಳಿಗಳಲ್ಲಿ ಹಳ್ಳಿಕಾರ್ ಕೂಡ ಒಂದು. ಭಾರತಿಯ ಗೋ ತಳಿಗಳಲ್ಲಿರುವ ಮೂರು ವಿಭಾಗಗಳಲ್ಲಿ ಹಳ್ಳಿಕಾರ್‌ನ್ನು ಅಪ್ಪಟ ಕೆಲಸಗಾರ ತಳಿಯಾಗಿ ಗುರುತಿಸುತ್ತಾರೆ. ಸತತ ೨೪ ಗಂಟೆ ೧೦–೧೪ ಟನ್ ಭಾರ ಎಳೆಯಬಲ್ಲ ಅಸದೃಶ ಶಕ್ತಿ ಸಾಮರ್ಥ್ಯ, ಅದ್ಭುತ ವೇಗ ಹೊಂದಿರುವ ಹಳ್ಳಿಕಾರಿನಂತಹ ಅಪರೂಪದ ತಳಿ, ವಿನಾಶದ ಅಂಚಿಗೆ ಸರಿದುದರ ಕಾರಣ ಹುಡುಕಹೊರಟರೆ ನಿಮಗೆ ಸಿಗುವ ಒಂದೇ ಒಂದು ಉತ್ತರ, ಭಾರತೀಯರ ರಕ್ತಗುಣ ನಿರ್ಲಕ್ಷ್ಯ ಮಾತ್ರ.

ದಿನಕ್ಕೆ ೪೦–೫೦ ಮೈಲಿ ದೂರವನ್ನು ಯಾವ ವಿಶ್ರಾಂತಿಯ ಅಗತ್ಯವಿಲ್ಲದೆ ಕ್ರಮಿಸಬಲ್ಲ ಹಳ್ಳಿಕಾರ್ ಕರ್ನಾಟಕದ, ಅಷ್ಟೇಕೆ ಇಡೀ ಭಾರತದ ಹೆಮ್ಮೆಯ ತಳಿ ಎನ್ನುತ್ತಾರೆ ಹಳ್ಳಿಕಾರಿನ ಬಗ್ಗೆ ವಿಶೇಷ ಸಂಶೊಧನೆ ಕೈಗೊಂಡಿರುವ ಎಮ್. ಎ. ಲಕ್ಷ್ಮಿ ತಾತಾಚಾರ್. ಇದರ ವೇಗ ಉತ್ಸಾಹಗಳಿಂದ ಹಳ್ಳಿಕಾರೆಂದರೆ ಕುದುರೆ ಇದ್ದಂತೆ ಎಂಬ ಅಂಬೊಣವೇ ಇದೆ. ಸಾಮನ್ಯವಾಗಿ ಇವುಗಳದ್ದು ಬೂದು ಬಣ್ಣ, ಹಿಂದಕ್ಕೆ ಬಗ್ಗಿದಂತಿರುವ ಕೋಡುಗಳು, ೧೭೦–೧೯೦ ಸೆಂಟಿಮೀಟರ್ ಎತ್ತರ ಹಾಗೂ ಅಜಮಾಸು ೪೫೦ ಕೆ.ಜಿ. ತೂಕ. ಕರಾವಿನ ಅವಧಿ ೨೫೦ರಿಂದ ೩೧೦ ದಿನಗಳು. ಅತ್ಯಂತ ಕಡಿಮೆ ಆಹಾರ ಸೇವನೆ ಇವುಗಳ ಇನ್ನೊಂದು ವೈಶಿಷ್ಟ್ಯ. ಹಿಂದಿನಿಂದಲೂ ಬೀಜದ ಹೋರಿಗಳನ್ನು ಆರಿಸಲು ಕೇವಲ ದೈಹಿಕ ಆಕಾರವೊಂದನ್ನೆ ಮಾನದಂಡವಾಗಿ ಪರಿಗಣಿಸಿದ್ದರಿಂದ ಈಗಿನ ತಳಿಗಳು ದಿನಕ್ಕೆ ಒಂದು–ಎರಡು ಲೀಟರ್ ಹಾಲು ಕೊಡುತ್ತವೆ ಅಷ್ಟೆ. ಬೀಜದ ಹೋರಿಯ ಆಯ್ಕೆಯಲ್ಲಿ ಒಂದಿಷ್ಟು ವಿವೇಕ ತೋರಿದ್ದರೆ ಉತ್ತಮ ಹಾಲಿನ ತಳಿ ಕೂಡ ಆಗಿದ್ದ ಹಳ್ಳಿಕಾರ್, ಕೇವಲ ಕೆಲಸದ ತಳಿಯಾಗಿ ರೂಪುಗೊಳುತ್ತಿರಲಿಲ್ಲ. ಇಂತಹ ಇನ್ನೆಷ್ಟೋ ಅವೈಜ್ಞಾನಿಕ ಕ್ರಮಗಳು ಹಳ್ಳಿಕಾರು ಸೇರಿದಂತೆ ಬಹಳಷ್ಟು ತಳಿಗಳ ಉಪಯುಕ್ತತೆಯ ವ್ಯಾಪ್ತಿಯನ್ನೆ ಕುಗ್ಗಿಸುವಂತೆ ಮಾಡಿರುವುದನ್ನು ನಾವು ಭಾರತದ ಕೃಷಿ ಇತಿಹಾಸದಲ್ಲಿ ಢಾಳಾಗಿ ಕಾಣಬಹುದು.

Bos Indicus ವರ್ಗಕ್ಕೆ ಸೇರುವ ಹಳ್ಳಿಕಾರು ಹೆಚ್ಚಾಗಿ ಕಂಡುಬರುವುದು ಹಳ್ಳಿಕಾರ್ ಬೆಲ್ಟ್ ಎಂದೆ ಗುರುತಿಸಲ್ಪಡುವ ಮೈಸೂರು, ಮಂಡ್ಯ, ತುಮಕೂರು, ಹಾಸನ ಪ್ರದೇಶಗಳಲ್ಲಿ. ಟಿಪ್ಪುಸುಲ್ತಾನನಿಗೆ ಬ್ರಿಟಿಷರ ವಿರುದ್ದ ಗೆಲ್ಲಲು ಹಳ್ಳಿಕಾರ್ ಸಹಾಯ ಮಾಡಿತ್ತು ಎನ್ನುವ ಕತೆಗಳನ್ನು ಹಳ್ಳಿಕಾರ್ ಹೊಂದಿರುವ ರೈತರು ಹೆಮ್ಮೆಯಿಂದ ಹೇಳುತ್ತಾರೆ. ಸಣ್ಣ–ಮಳ್ಳಿಗೆ, ಗುಜುಮಾವು ಎಂಬ ಎರಡು ಉಪತಳಿಗಳು ಇದ್ದವು ಎನ್ನುತ್ತಾರಾದರೂ ಸಾಕಷ್ಟು ಮಾಹಿತಿ ಲಭ್ಯವಿಲ್ಲ. ಭಾರತೀಯ ಅಂಚೆ ಇಲಾಖೆ ಹಳ್ಳಿಕಾರ್ ಮೇಲೆ ವಿಶೇಷ ಅಂಚೆಚೀಟಿ ಬಿಡುಗಡೆ ಮಾಡಿದೆ.

ಈ ತಳಿಗಳ ಅಭಿವೃದ್ಧಿಗಾಗಿ ಕರ್ನಾಟಕ ಸರ್ಕಾರ ಸೇರಿದಂತೆ ಕೆಲ ಸಂಘ ಸಂಸ್ಥೆಗಳು ಕ್ರಮ ಕೈಗೊಂಡಿವೆಯಾದರೂ ಇವುಗಳ ಸಂಖ್ಯೆ ದಿನ ದಿನಕ್ಕೂ ಕ್ಷೀಣಿಸುತ್ತಲೇ ಸಾಗಿದೆ. ಇರುವ ಗೋವುಗಳು ಕೂಡ ಕೇವಲ ಶೇಕಡ ೬೦–೭೦ ತಳಿಶುದ್ಧತೆ ಹೊಂದಿವೆ. ಸರಿಯಾದ ಸಂಶೋಧನೆ, ಸಂರಕ್ಷಣೆ, ಪ್ರಚಾರ ಇಲ್ಲದೆ ಹೋದರೆ ಕೆಲವೇ ಕಾಲದಲ್ಲಿ ನಾವು ಒಂದು ಅತ್ಯಮೂಲ್ಯ ತಳಿಯನ್ನು ಕಳೆದುಕೊಳ್ಳುವುದಂತೂ ಖಂಡಿತ.

**–ಮಧುಕೇಶ ದೊಡ್ಡೇರಿ**



**ಕಗ್ಗಲಿಪುರ ಗೋಲೋಕದಲ್ಲಿ ರೈತ ಸಮಾವೇಶ**

## ರೈತರ ಆತ್ಮಹತ್ಯೆ ತಡೆಗೆ ಉಪಾಯ: ಗೋ ಆಧಾರಿತ ಕೃಷಿ

ಬೆಂಗಳೂರು, ಫೆ, ೧೭, ೨೦೦೮: ಗೋ ಆಧಾರಿತ ಸ್ವಾವಲಂಬಿ ಕೃಷಿಯಿಂದ ಮಾತ್ರ ರೈತರ ಆತ್ಮಹತ್ಯೆಗಳನ್ನು ನಿಲ್ಲಿಸಬಹುದು. ಆದುದರಿಂದ ಸರ್ಕಾರಗಳು ಗೋ ಆಧಾರಿತ ಕೃಷಿಗೆ ಬೆಂಬಲವಾಗಿ ನಿಲ್ಲಬೇಕು ಎಂದು ರಾಜ್ಯ ಪ್ರಶಸ್ತಿ ವಿಜೇತ ಗೋ ಆಧಾರಿತ ಕೃಷಿಕ ರಮೇಶರಾಜು ಅವರು ಇಲ್ಲಿ ಆಗ್ರಹಿಸಿದರು.

ಬೆಂಗಳೂರಿನ ಕಗ್ಗಲಿಪುರದ ಗೋಲೋಕದ ವಾತ್ಸಲ್ಯ ವೇದಿಕೆಯಲ್ಲಿ ಶ್ರೀರಾಮಚಂದ್ರಾಪುರ ಮಠದ ವತಿಯಿಂದ ಏರ್ಪಡಿಸಲಾಗಿದ್ದ ರೈತಸಮಾವೇಶವನ್ನುದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಪ್ರಸ್ತುತ ಪರಿಸ್ಥಿತಿಯಲ್ಲಿ ಭಾರತೀಯ ಕೃಷಿಕರ ದುರ್ಗತಿಗೆ ಕಾರಣವೇನು ಎಂಬುದನ್ನು ತಮ್ಮ ಅನುಭವದ ಆಧಾರದಲ್ಲಿ ಎಳೆಎಳೆಯಾಗಿ ವಿವರಿಸಿದ ಅವರು, ರೈತರು ಗೋ ಆಧಾರಿತ ಕೃಷಿ ಪದ್ಧತಿಯನ್ನು ಬಿಟ್ಟು ರಾಸಾಯನಿಕ ಗೊಬ್ಬರವನ್ನಾಧರಿಸಿದ ಆಧುನಿಕ ಕೃಷಿ ಪದ್ಧತಿಯನ್ನು ಅನುಸರಿದ್ದೇ ಇಂದಿನ ಎಲ್ಲ ಸಮಸ್ಯೆಗಳಿಗೆ ಮೂಲ ಎಂದು ಹೇಳಿದರು.

ಭಾರತೀಯ ನಾಟಿ ಹಸುವಿನ ಒಂದು ಗ್ರಾಂ ಸೆಗಣಿಯಲ್ಲಿ ೩೦೦ರಿಂದ ೫೦೦ ಕೋಟಿಯಷ್ಟು ಸೂಕ್ಷ್ಮ ಜೀವಿಗಳಿವೆ. ಒಂದು ಗ್ರಾಂನಷ್ಟು ಮಣ್ಣಿನಲ್ಲಿ ನೂರು ಕೋಟಿಯಷ್ಟು ಸೂಕ್ಷ್ಮ ಜೀವಿಗಳಿವೆ. ಸುಭಾಷ್ ಪಾಳೇಕರ್ ಅವರ ಕೃಷಿ ಪದ್ಧತಿಯಲ್ಲಿ ಇವೆರಡು ಮಿಶ್ರಗೊಳ್ಳುವುದರಿಂದ ಭೂಮಿಯಲ್ಲಿ ಸೂಕ್ಷ್ಮ ಜೀವಿಗಳ ಸಾಗರವೇ ನಿರ್ಮಾಣವಾಗಿ ಭೂಮಿ ಫಲವತ್ತಾಗುತ್ತದೆ ಎಂದು ಅವರು ನುಡಿದರು.

ವಿದೇಶೀ ಹಸುಗಳ ಒಂದು ಗ್ರಾಂ ಸೆಗಣಿಯಲ್ಲಿ ೫೦ರಿಂದ ೭೦ ಕೋಟಿಯಷ್ಟು ಮಾತ್ರ ಸೂಕ್ಷ್ಮ ಜೀವಿಗಳಿವೆ. ಅನೈಸರ್ಗಿಕ ಸಾಕಣೆ ಪದ್ಧತಿಗಳನ್ನು ಅನುಸರಿಸುವ ಕಾರಣ ಈ ಸೂಕ್ಷ್ಮ ಜೀವಿಗಳು ಭೂಮಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತವೆ ಎಂದು ಅವರು ನುಡಿದರು.

ಪಾರಂಪರಿಕ ಕೃಷಿ ಪದ್ಧತಿಯಲ್ಲಿ ರೈತರು ಗೋ ಆಧಾರಿತ ಗೊಬ್ಬರ, ಬೀಜ ತಯಾರಿಸಿ ಸ್ವಾವಲಂಬಿಗಳಾಗಿ ಕೃಷಿ ಮಾಡುತ್ತಿದ್ದರು. ಉಳುಮೆಗೆ ಎತ್ತುಗಳನ್ನೇ ಬಳಸುತ್ತಿದ್ದರು. ಆಧುನಿಕ ಪದ್ಧತಿಯಲ್ಲಿ ಉಳುಮೆಗೆ ಟ್ರ್ಯಾಕ್ಟರ್ ಬಂತು. ಬೀಜ ಮತ್ತು ರಾಸಾಯನಿಕ ಗೊಬ್ಬರಗಳು ಹೊರಗಿನ ಕಂಪೆನಿಗಳಿಂದ ಬಂದವು. ರೈತ ಪ್ರತಿಯೊಂದಕ್ಕೂ ತುಟ್ಟಿಯಾದ ಹೊರಗಿನ ಉತ್ಪನ್ನಗಳನ್ನೇ ಆಧರಿಸಬೇಕಾಗಿ ಬಂತು. ಸಾಲಕೂಪದಲ್ಲಿ ಮುಳುಗಲು ಮತ್ತು ಆತ್ಮ ಹತ್ಯೆ ಮಾಡಿಕೊಳ್ಳುವಂತಾಗಲು ಈ ದುಬಾರಿ ಆಧುನಿಕ ಪದ್ಧತಿಯೇ ಕಾರಣ ಎಂದು ಅವರು ವಿಶ್ಲೇಷಿಸಿದರು.

ಹಿಂದೆ ಗೋವುಗಳ ಸಂಖ್ಯೆ ಆಧಾರದಲ್ಲಿ ಸಂಪತ್ತು ಪ್ರತಿಷ್ಠೆಯನ್ನು ಲೆಕ್ಕಹಾಕಲಾಗುತ್ತಿತ್ತು. ಗೋವನ್ನು ಬಿಟ್ಟು ಇರಲಾಗದಂತಹ ಬಾಂಧವ್ಯ ಇತ್ತು. ಇಂದು ಗೋವು ಇದ್ದರೆ ಹುಡುಗಿ ಕೊಡುವುದಿಲ್ಲ ಎಂಬ ಮಟ್ಟಕ್ಕೆ ಬಂದಿದ್ದೇವೆ ಎಂದು ಅವರು ವಿಷಾದಿಸಿದರು.




ನಮ್ಮ ಪೂರ್ವಜರು ಹೇಳಿದ್ದೆಲ್ಲವೂ ಮೂಢನಂಬಿಕೆಗಳಲ್ಲ. ಅವುಗಳ ಹಿಂದೆ ವೈಜ್ಞಾನಿಕ ಚಿಂತನೆಯಿದೆ. ಈ ಜ್ಞಾನ, ಪರಂಪರೆಯನ್ನು ನಾವಿಂದು ಕಳೆದುಕೊಳ್ಳುತ್ತಿದ್ದೇವೆ. ಬದುಕಿನ ಮೌಲ್ಯಗಳನ್ನು ಮರೆಯುತ್ತಿದ್ದೇವೆ. ಆದರೆ ವಿದೇಶೀಯರು ಎಚ್ಚೆತ್ತುಕೊಂಡಿದ್ದು ಸಾವಯವ ಮಳಿಗೆಗಳನ್ನು ತೆರೆಯುತ್ತಿದ್ದಾರೆ ಎಂದು ಅವರು ನುಡಿದರು.

ಸ್ಥಳೀಯ ಮುಖಂಡ ಶಿವಕುಮಾರ ಅವರೂ ಮಾತನಾಡಿದರು. ವೆಂಕಟೇಶ ಚೇನಿಯ, ಕಿಸಾನ್ ಸಂಘದ ಪುಟ್ಟಸ್ವಾಮಿ, ಗೋಲೋಕದ ಸ್ಥಳದಾನಿ ಬಿ. ಜೆ. ಶರ್ಮ, ಮಹಾವೀರ ಪ್ರಸಾದ ಸೋನಿಕ ಮತ್ತಿತರು ಹಾಜರಿದ್ದರು. ಕಾಮದುಘಾ ಮುಖ್ಯಸ್ಥ ಕೃಷ್ಣಮೂರ್ತಿ ಕಾರ್ಯಕ್ರಮ ನಿರ್ವಹಿಸಿದರು. ಸಿ. ಎಚ್. ಎಸ್. ಭಟ್ ಪ್ರಾರ್ಥಿಸಿದರು.



**ಹಳ್ಳಿಕಾರ್, ಕರ್ನಾಟಕ**



# ಬ್ರೆಜಿಲ್‌ನಲ್ಲಿ ಗಿರ್ ತಳಿಯ ಹಸವಿನ ಮೇಲ್ಮೆ

ಗಿರ್ ತಳಿಯ ಹಸುವನ್ನು ಅತಿ ಹೆಚ್ಚು ಹಾಲು ನೀಡುವ ಗೋವು ಎಂಬುದಾಗಿ ವಿಶ್ವದಾದ್ಯಂತ ತಿಳಿಯಲಾಗುತ್ತದೆ. ಸೌರಾಷ್ಟ್ರದಿಂದ ಬ್ರೆಜಿಲ್‌ಗೆ ಒಯ್ಯಲಾಗಿರುವ ಈ ತಳಿಯ ಹಸು ಅಲ್ಲಿ ತನ್ನ ಮೇಲ್ಮೆಯನ್ನು ಸಾಧಿಸಿದೆ. ಬ್ರೆಜಿಲ್ ನ ಆರ್ಥಿಕತೆ ಮುಖ್ಯವಾಗಿ ಪಶುಪಾಲನ ಆಧಾರಿತವಾದುದು. ಹಾಲಿನ ಮಾರಾಟದಿಂದ ಅಲ್ಲಿನ ಉದ್ಯಮಿಗಳು ಕೋಟ್ಯಾಧೀಶರಾಗಿದ್ದಾರೆ. ಈ ಪಶುಪಾಲಕರ ಪಾಲಿಗೆ ಗಿರ್ ಹಸು ಚಿನ್ನದ ಮೊಟ್ಟೆ ಇಡುವ ಕೋಳಿಯೇ ಆಗಿದೆ. ಗೋಪಾಲನೆ ಮತ್ತು ಸಂವರ್ಧನೆಯ ರಂಗದಲ್ಲಿ ಬ್ರೆಜಿಲ್ ನ ಸರ್ವೋಚ್ಚ ಕೇಂದ್ರ ಸಂಸ್ಥೆಯಾಗಿರುವ 'ಎಸೋಸಿಯಾ ಕಾಕೀಡಾಸೋ ಡಿ ಜೆಬೂ' ಏರ್ಪಡಿಸಿರುವ ಗೋಜಾತ್ರೆಯಲ್ಲಿ ಗಿರ್ ತಳಿಯ ಹಸುವೊಂದು ೩೬ಲಕ್ಷ ರುಪಾಯಿಗಳ ಬೆಲೆಗೆ ಮಾರಲ್ಪಟ್ಟಿದೆ. ಅದಕ್ಕೆ ಕಾರಣ ತಿಳಿಸಿದ ರಾಜಕೋಟದ ಗೋಪ್ರೇಮಿ ಮತ್ತು ಈ ಬಗ್ಗೆ ವಿಶೇಷ ಅಧ್ಯಯನವುಳ್ಳ ಶ್ರೀಜನಕಭಾಯಿ ತ್ರಿವೇದಿ ಅವರು ಗಿರ್ ಹಸು ತನ್ನ ಮಾಲೀಕನಿಂದ ತಾನು ಪಡೆದುದಕ್ಕಿಂತ ಹೆಚ್ಚು ಅವನಿಗೆ ವಾಪಸ್ ನೀಡುತ್ತದೆ ಎನ್ನುತ್ತಾರೆ. ಪ್ರತಿಕೂಲ ಹವಾಮಾನದಲ್ಲೂ ಹೋರಾಡಿ ಬದುಕುವಂತಹ ಅದ್ಭುತ ಸಾಮರ್ಥ್ಯ ಅದರಲ್ಲಿದೆ. ಇದರ ಆರೈಕೆಗೆ ತಗಲುವ ವೆಚ್ಚವೂ ಮಿಕ್ಕ ತಳಿಯ ಹಸುಗಳಿಗಿಂತ ಕಡಿಮೆ.



ಗಿರ್, ಗುಜರಾತ್

ಈ ಗೋವು ಬ್ರೆಜಿಲ್ ತಲುಪಿದುದು ಹೇಗೆ ? ನೂರೈವತ್ತು ವರ್ಷಗಳ ಹಿಂದೆ ಪೋರ್ಚುಗೀಸರು ದಕ್ಷಿಣ ಅಮೇರಿಕಕ್ಕೆ ಯುರೋಪ್‌ನಿಂದ ಹಸುಗಳನ್ನು ಒಯ್ದಿದ್ದರು. ಆದರೆ ಆ ಹಸುಗಳಿಗೆ ಅಲ್ಲಿನ ಹವಾಮಾನ ಒಗ್ಗಲಿಲ್ಲ. ೧೮೫೧ರಲ್ಲಿ ಬ್ರೆಜಿಲ್‌ನ ಪಶುಪಾಲಕರು ಸೌರಾಷ್ಟ್ರದಿಂದ ಗಿರ್, ಕಚ್‌ನಿಂದ ಕಾಂಕರೇಜ್ ಮತ್ತು ಆಂಧ್ರದಿಂದ ಔಂಗೋಲ್ ತಳಿಯ ಹಸುಗಳನ್ನು ಕೊಂಡೊಯ್ದರು. ಬ್ರೆಜಿಲ್‌ನ ವಿಶಾಲ ಹುಲ್ಲುಗಾವಲಿನಲ್ಲಿ ಈ ಹಸುಗಳು ಇನ್ನಷ್ಟು ಚೆನ್ನಾಗಿ ಬೆಳೆದವು. ಇವುಗಳ ಪೈಕಿ ಗಿರ್ ಗೋವನ್ನು ಹಾಲಿಗಾಗಿಯೇ ಬಳಸಲಾಗುತ್ತದೆ. ೧೯೨೦ರಲ್ಲಿ ಬ್ರೆಜಿಲ್‌ನ ಪಶುಪಾಲಕರು ಭಾರತದಿಂದ ಹಡಗು ತುಂಬ ಹಸುಗಳನ್ನು ಒಯ್ದರು. ೧೯೬೦ರಲ್ಲಿ ಪುನಃ ಅಲ್ಲಿನ ಪಶುಪಾಲಕರು ಭಾವನಗರದ ಮಹಾರಾ ಕೃಷ್ಣಕುಮಾರ್ ಸಿಂಹ ಅವರಿಂದ ಶುದ್ಧ ಗಿರ್ ತಳಿಯ ಹಸುಗಳನ್ನು ಕೊಂಡೊಯ್ದರು. ಅಲ್ಲಿ ಆಧುನಿಕ ವೈಜ್ಞಾನಿಕ ಪದ್ಧತಿಯಲ್ಲಿ ಗೋವಂಶವನ್ನು ಬೆಳೆಸಿದ ಕಾರಣದಿಂದಾಗಿ ಈಗ ಬ್ರೆಜಿಲ್‌ನಲ್ಲಿ ಗಿರ್ ಹಸುಗಳ ಸಂಖ್ಯೆ ೬೦ಲಕ್ಷಕ್ಕಿಂತ ಹೆಚ್ಚಿದೆ.

ಪ್ರಸ್ತುತ ಗುಜರಾತಿನ ಜಸದಣದ ಮಾಜಿ ಶಾಸಕ ಸತ್ಯಜಿತ್ ಖಾಚರ್ ಅವರಲ್ಲಿ ಅತಿ ದೊಡ್ಡದಾದ ಗಿರ್ ತಳಿಯ ಹಸುಗಳ ಗೋಶಾಲೆ ಇದೆ. ಅದರಲ್ಲಿ ೧೦೮ ಹಸುಗಳಿವೆ. ಈ ಗೋಶಾಲೆಯ ರೂಪಾ ಎಂಬ ಹೆಸರಿನ ಹಸು ೧೯೨ರಲ್ಲಿ ವಿಶ್ವದಲ್ಲೇ ಅತಿ ಶ್ರೇಷ್ಠ ಗೋವು ಎಂಬ ಮಾನ್ಯತೆ ಗಳಿಸಿದೆ. ಭಾರತ ಸರಕಾರವು ಅದರ ಕುರಿತು ಒಂದು ಅಂಚೆಚೀಟಿಯನ್ನು ಸಹ ಹೊರ ತಂದಿತ್ತು. ಇದೇ ಹಸುವಿನಿಂದ ಜನಿಸಿರುವ 'ಜಸದಣ' ಎಂಬ ಹೆಸರಿನ ಹೋರಿಯು ಅತಿ ಶ್ರೇಷ್ಠ ಹೋರಿ ಎಂಬ ಮಾನ್ಯತೆ ಪಡೆದಿದೆ. ಬ್ರೆಜಿಲ್‌ನ ಪಶುಪಾಲಕರು ಅದನ್ನು ೧.೭೫ ಲಕ್ಷ ಡಾಲರ್‌ಗೆ ಖರೀದಿಸಲು ಮುಂದಾಗಿದ್ದರು. ಆದರೆ ಸತ್ಯಜಿತ್ ಖಾಚರ್ ಅವರು ಅದನ್ನು ಮಾರಲು ಒಪ್ಪಲಿಲ್ಲ.

(ಕೃಪೆ: ಆಪ್ತಸಂವಾದ ಮತ್ತು ಧರ್ಮಭಾರತೀ)

# ಕಗ್ಗಲಿಪುರ ಸಮರ್ಪಣ – ೨೦೦೮ರ ಚಿತ್ರಗಳು



